ವಿಷಯ :- ಮೈಸೂರು ಟೊಬ್ಯಾಕೊ ಕಂಪನಿ

ಪ್ರ. ಸಂ. 603 (1479) ಶ್ರೀ ಎಸ್. ನಂಜಪ್ಪ (ಕೆ. ಆರ್. ನಗರ) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಕೃಷ್ಣರಾಜನಗರ, ಪೆರಿಯಾಪಟ್ಟಣ, ಹುಣುಸೂರು ಮತ್ತು ಆರಕಲಗೂಡು ತಾಲ್ಲೂಕು ಹೊಗೆಸೊಪ್ಪು ಬೆಳೆಗಾರರು ಬೆಳೆದ ಹೊಗೆಸೊಪ್ಪನ್ನು ಮಾರಲಾಗದ ಪರಿಸ್ಥಿತಿಯನ್ನು ಟೊಬ್ಯಾಕೋ ಕಂಪನಿಯವರು ನಿರ್ಮಾಣ ಮಾಡಿ ಅದನ್ನು ಕಡಿಮೆ ಬೆಲೆಗೆ ಕೊಂಡು ಹೀಗೆ ಕೊಂಡ ಹೊಗೆಸೊಪ್ಪಿನ ಬೆಲೆಯನ್ನು (ಕೊಟ್ಯಾಂತರ) ಬೆಳೆಗಾರರಿಗೆ ನೀಡದೆ ಅವರಿಗೆ ತೊಂದರೆಯನ್ನುಂಟುಮಾಡಿದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ, ಸರ್ಕಾರದವರು ಹೊಗೆಸೊಪ್ಪಿನ ಕಂಪನಿಯವರ ಪರವಾನಗೆಯನ್ನು ರದ್ದು ಮಾಡಲು ಮತ್ತು ಇತರೆ ಕಾನೂನು ಕ್ರಮ ಕೈಗೊಳ್ಳಲು ಉದ್ದೇಶಿಸುವರೆ ;

ಇ. ಹೊಗೆಸೊಪ್ಪು ಬೆಳೆಗಾರರು ಪದೇ ಪದೇ ಈ ರೀತಿಯ ತೊಂದರೆಯನ್ನು ಅನುಭವಿಸುತ್ತಿರುವುದರಿಂದ ಯಾವುದಾದರೂ ಶಾಶ್ವತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು):—

ಅ. ನಿಜಾಂಶಗಳು ಹೀಗಿವೆ. ವರ್ಜೀನಿಯಾ ತಂಬಾಕಿನ ಮಾರುಕಟ್ಟೆಯ ಕಾಲ ಈ ಸಾಲಿನಲ್ಲಿ ಒಂದು ತಿಂಗಳು ತಡವಾಗಿ ಪ್ರಾರಂಭವಾಯಿತು. ಇದಕ್ಕೆ ಕಾರಣವೇನೆಂದರೇ ನೆರೆಯ ಆಂಧ್ರ ಪ್ರದೇಶದಲ್ಲಿ ಹೆಚ್ಚಿನ ತಂಬಾಕು ದಾಸ್ತಾನು ಉಳಿದಿದ್ದು ಹಾಗೂ ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ಒಳ್ಳೆಯ ತಂಬಾಕಿನ ಬೆಳೆಯ ನೀರಿಕ್ಷ ಕೂಡ ಇತ್ತು. ಒಟ್ಟಿನಲ್ಲಿ ಮೈಸೂರು ತಂಬಾಕು ಕಂಪನಿಯನ್ನು ಒಳಗೊಂಡು 30 ಕಂಪನಿಗಳು ತಂಬಾಕು ಖರೀದಿಸಿದೆ, ಈ ಪೈಕಿ 9 ಕಂಪನಿಗಳು ತಾವು ಕೊಂಡ ತಂಬಾಕಿನ ಪೂರ್ತ ಹಣವನ್ನು ಬೆಳೆಗಾರರಿಗೆ ಪಾವತಿ ಮಾಡಿಲ್ಲವೆಂದು ತಿಳಿದುಬಂದಿದೆ. ಮತ್ತು ಭಾರತೀಯ ತಂಬಾಕು ಮಂಡಳಿಗೆ ಈ ಪರಿಸ್ಥಿತಿಯು ತಿಳಿದಿದೆ.

ಆ. ಭಾರತೀಯ ತಂಬಾಕು ಮಂಡಳಿಯು ಸೂಕ್ತ ಅಧಿಕಾರವುಳ್ಳ ಸಂಸ್ಥೆಯಾಗಿದೆ ಮತ್ತು ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

ಇ. ಕೇಂದ್ರ ಕಾಯಿದೆಯ ಪ್ರಕಾರ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ಭಾರತೀಯ ತಂಬಾಕು ಮಂಡಳಿ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದೆ. ಈ ತಂಬಾಕು ಮಂಡಳಿಯು ತಂಬಾಕು ಬೆಳೆಗಾರರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುತ್ತದೆ. ಇದರಲ್ಲಿ ತಂಬಾಕು ಮಾರಾಟವೂ ಸೇರಿದೆ,

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಮೊದಲನೆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರತಕ್ಕಂಥದ್ದು ಅಷ್ಟು ಸಮಂಜಸವಾಗಿಲ್ಲವೆಂದು ಭಾವಿಸಿಕೊಂಡಿದ್ದೇನೆ. ಮೈಸೂರು ಟ್ಯೊಬ್ಯಾಕೋ ಕಂಪನಿಯವರು ಮಾರ್ಕೆಟ್ ಇಲ್ಲದಮೇಲೆ ಖಾಸಗಿ ಕಂಪನಿಯವರುಗಳಿಂದ ಹೆಚ್ಚಿನ ದರವನ್ನು ಕೊಟ್ಟು ಕೊಂಡು ಕೊಳ್ಳಲು ಪ್ರಾರಂಭ ಮಾಡಿದ್ದರಿಂದ ಆಂಧ್ರ ಪ್ರದೇಶದಿಂದ ಹೆಚ್ಚಿನ ಪ್ರಮಾಣದಲ್ಲಿ ಬರತಕ್ಕಂಥದ್ದಕ್ಕೆ ಅವಕಾಶವಾಯಿತು. ಇದರಿಂದಾಗಿ ನಮ್ಮಲ್ಲಿ ಸಿಕ್ಕುತ್ತಿಲ್ಲವೆಂದು ಹೇಳತಕ್ಕಂಥದ್ದು ಸರಿಯಲ್ಲ. ಎರಡನೆಯುದಾಗಿ, ಭಾರತ ಟ್ಯೊಬ್ಯಾಕೋ ಕಂಪನಿಯವರು ಏನು ಪ್ರತಿನಿಧಿಗಳನ್ನು ನೇಮಕ ಮಾಡುತ್ತಾರೆ ಇದರಲ್ಲಿ ಬೆಳೆಗಾರರು ಇರುತ್ತಾರೋ ಅಥವಾ ವ್ಯಾಪಾರಸ್ಥರು ಇರುತ್ತಾರೋ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ರೇವಣ್ಣ.—ಭಾರತೀಯ ತುಂಬಾಕು ಮಂಡಳಿಗೆ ಕರ್ನಾಟಕ ರಾಜ್ಯದಿಂದ ಮೂರು ಜನರನ್ನು ನೇಮಿಸುತ್ತಾರೆ. ಇದಕ್ಕೆ ಮಾನ್ಯ ಕಾಳಮರಿಗೌಡರು ಒಬ್ಬ ಸದಸ್ಯರಾಗಿರುತ್ತಾರೆ. ಮತ್ತೆ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಹಾಗೂ ಮತ್ತೊಬ್ಬ ಸದಸ್ಯರು ಇರುತ್ತಾರೆ. ಅವರು ಕರ್ನಾಟಕರಾಜ್ಯದ ಹಿತರಕ್ಷಣೆಯನ್ನು ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಎಸ್. ನಂಜಪ್ಪ.—ಮತ್ತೊಬ್ಬ ಸದಸ್ಯರು ಇರುತ್ತಾರೆಂದು ಹೇಳಿರುವುದರಲ್ಲಿ ಹೊಗೆ ಸೊಪ್ಪಿನ ಬೆಳೆಗಾರರ ಪ್ರತಿನಿಧಿಯೋ ಆಥವಾ ವ್ಯಾಪಾರಸ್ಥರ ಪ್ರತಿನಿಧಿಯೋ ಎಂದು ಕೇಳುತ್ತೇನೆ.

ಶ್ರೀ ಎಸ್. ರೇವಣ್ಣ.—ಬೆಳೆಗಾರರ ಪ್ರತಿನಿಧಿಗಳು ಒಬ್ಬರು ಸದಸ್ಯರಾಗಿರುತ್ತಾರೆ.

ಡಾ॥ ಎಚ್. ಎಲ್. ತಿಮ್ಮೇಗೌಡ —10–15 ಕಂಪೆನಿಗಳವರು ಮೈಸೂರು ಟ್ಯೊಬ್ಯಾಕೋ ಕಂಪನಿಯವರಿಗೆ ಸುಮಾರು ನಾಲ್ಕು ಕೋಟಿ ರೂಪಾಯಿಗಳವರೆಗೆ ಹೊಗೇಸೊಪ್ಪನ್ನು ಮಾರಾಟ ಮಾಡಿರುತ್ತಾರೆ. ಪೆರಿಯಾ ಪಟ್ಟಣದಲ್ಲಿರತಕ್ಕಂಥ ಗಣೇಶ ಟ್ಯೊಬ್ಯಾಕೋ ಕಂಪನಿಯವರು ಕೇಂದ್ರ ಬೋರ್ಡ್‌ನಿಂದ ಬಹಳ ಕಡಿಮೆ ಬೆಲೆಯಲ್ಲಿ ಹೊಗೆ ಸೊಪ್ಪನ್ನು ಕೊಂಡು ಮೈಸೂರು ಟ್ಯೊಬ್ಯಾಕೋ ಕಂಪನಿಯವರಿಗೆ ಸುಮಾರು 10–15 ರೂಪಾಯಿಗಳಿಗೆ ಮಾರಾಟ ಮಾಡಿ ಲಕ್ಷಾಂತರ ರೂಪಾಯಿಗಳ ಲಾಭವನ್ನು ಮಾಡಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ. ಎರಡನೆಯದಾಗಿ, ನಮ್ಮ ರಾಜ್ಯದ ಪ್ರತಿನಿಧಿಗಳು ಬೋರ್ಡಿನಲ್ಲಿದ್ದು, ಅವರ ಕಾಲದಲ್ಲಿ ಈರೀತಿಯಾದ ಒಂದು ಅವ್ಯವಹಾರ ನಡೆದಿರಬೇಕಾದರೆ ಅವರು ಸರ್ಕಾರದ ಗಮನಕ್ಕೆ ತರಲಿಲ್ಲವೇ ? ಈರೀತಿ ಅವ್ಯವಹಾರಡಲ್ಲಿ ತೊಡಗಿದ್ದ ಗಣೇಶ ಕಂಪೆನಿಯ ಲೈಸೆನ್ಸ್‌ನ್ನು ರದ್ದುಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ರೇವಣ್ಣ.—ಪರವಾನಗೆಯನ್ನು ವಜಾ ಮಾಡತಕ್ಕಂಥದ್ದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮತ್ತೆ ಅವರು ಹೊಗೆಸೊಪ್ಪನ್ನು ಕಡಿಮೆ ಬೆಲೆಗೆ ತೆಗೆದುಕೊಂಡು ಹೆಚ್ಚಿನ ಬೆಲೆಗೆ ಮಾರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ.

ವಿಷಯ :– ಮೊಳಕಾಲ್ಮೂರಿನಲ್ಲಿರುವ ಕಿರಿಯ ಕಾಲೇಜಿನಲ್ಲಿ ಕೊಠಡಿಗಳ ಕೊರತೆ

ಪ್ರ ಸಂ. 604 (1491) ಶ್ರೀ ಎನ್. ಜಿ. ನಾಯಕ್ (ಮೊಳಕಾಲೂರು)* .––ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. ಮೊಳಕಾಲ್ಮೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಯಾಗಿದ್ದು ಕೊಠಡಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಈಗ ಸುಮಾರು ಹನ್ನೆರಡು ವರ್ಷಗಳಿಂದಲೂ ಕಿರಿಯ ಕಾಲೇಜನ್ನು ಪ್ರೌಢಶಾಲೆಯಲ್ಲಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ. ವಿದ್ಯಾಮಂತ್ರಿಗಳು ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದು ನಿಜವೆ ;

ಈ. ಹಾಗಿದ್ದಲ್ಲಿ ಸದರಿ ಆಶ್ವಾಸನೆಯನ್ನು ಈ ಸಾಲಿನಲ್ಲಿ ಈಡೇರಿಸಲಾಗುವುದೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).

ಅ. ಬಂದಿದೆ.

ಆ. ಬಂದಿದೆ.

ಇ. ಹಾದು.

ಈ. ಚಿತ್ರದುರ್ಗ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರಿಂದ 5 ಕೊಠಡಿಗಳ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕರೆಯಲಾಗಿದೆ. ಅದು ಬಂದ ನಂತರ ಸೂಕ್ತ ಕ್ರಮ ಕೈ ಗೊಳ್ಳಲಾಗುವುದು.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಮೊಳಕಾಲ್ಮೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಬಂದಿದೆ ಯೆಂದು ತಿಳಿಸಿರುತ್ತಾರೆ. ಕಳೆದ 12 ವರ್ಷಗಳಿಂದಲೂ ಕಟ್ಟಡಗಳ ಕೊರತೆಯಿಂದಾಗಿ ಮರದ ನೆರಳಿನಲ್ಲಿ ನಡೆಸುತ್ತಿರುತ್ತಾರೆ. ಎರಡನೆಯದಾಗಿ, ಸುಮಾರು ಹನ್ನೆರಡು ವರ್ಷಗಳಿಂದಲೂ ಕಿರಿಯ ಕಾಲೇಜನ್ನು ಪ್ರೌಢಶಾಲೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಉತ್ತರಿಸಿರುತ್ತಾರೆ. ಈ ಕಾಲೇಜಿನ ಕೊಠಡಿಗಳನ್ನು ಕಟ್ಟಿಸಿಕೊಡಲು ಮರಿಯಮ್ಮ ಎಂಬುವರು ಹನ್ನೆರಡು ವರ್ಷಗಳ ಹಿಂದೆಯೇ 20 ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದರೂ ಕೂಡ ಇದುವರೆಗೆ ಯಾವ ಕಾರ್ಯಕ್ರಮವನ್ನು ತೆಗೆದು ಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕು. ಕಡೆಯ ಪ್ರಶ್ನೆಗೆ